**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 1801/2024**

**ಸಿ.ಡಬ್ಲ್ಯೂಃ 4 ಪಿ.ಡಬ್ಲ್ಯೂಃ 3**

| | | |
|---|---|---|
| ಸಾಕ್ಷಿದಾರನ ಹೆಸರು | : | ಶ್ರೀರಾಮ |
| ತಂದೆಯ ಹೆಸರು | : | ಎಸ್ ವಿ ಬಾಬು |
| ವಯಸ್ಸು | : | 59 ವರ್ಷ |
| ಕೆಲಸ | : | ಹೋಂ ಗಾರ್ಡ |
| ವಾಸ | : | ಸಿರುಗುಪ್ಪ |

**ಸಾಕ್ಷಿಗೆ ದಿನಾಂಕಃ 09.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನಾನು ದಿಃ 19.04.2024 ರಂದು ಚಾಸಾ 1 ರವರು ರಸ್ತೆ ಗಾಲು ಮಾಡಲು ನನ್ನನ್ನು ಕರೆದುಕೊಂಡು ಹೋಗಿದ್ದರು. ಆಗ ನಾವು ತೆಕ್ಕಲಕೋಟೆಯಿಂದ ಉಪ್ಪಾರಹೊಸಳ್ಳಿ ರಸ್ತೆಯ ಮದ್ಯ ಒಂದು ನೀರಿನ ಟ್ಯಾಂಕ್ ಬಳಿ ಇದ್ದಾಗ ಬೆಃ 11.00 ಗಂಟೆಗೆ ಒಬ್ಬ ವ್ಯಕ್ತಿ ಟಿ ವಿ ಎಸ್ ಎಕ್ಸ ಎಲ್ ವಾಹನದಲ್ಲಿ ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಏನನ್ನೋ ಇಟ್ಟುಕೊಂಡು ಹೋಗುತ್ತಿದ್ದನ್ನು ಚಾಸಾ 1 ರವರು ಗಮನಿಸಿದರು. ಆತನನ್ನು ತಡೆದು ಪರಿಶೀಲಿಸಿದಾಗ ಸದರಿ ಚೀಲದಲ್ಲಿ 90 ಎಂ ಎಲ್ ನ ಒರಿಜಿನಲ್ ಚಾಯ್ಸ ವಿಸ್ಕಿಯ 45 ಪ್ಯಾಕೇಟ್ ಮತ್ತು 90 ಎಂ ಎಲ್ ನ ಹೈ ವರ್ಡ್ಸ ವಿಸ್ಕಿಯ 30 ಪ್ಯಾಕೇಟ್ ಗಳು ಇದ್ದವು. ಚಾಸಾ 1 ರವರು ರಾಸಾಯನಿಕ ಪರೀಕ್ಷೆಗಾಗಿ ಒರಿಜಿನಲ್ ಚಾಯ್ಸ ನ 16 ಪ್ಯಾಕೇಟ್ ಹಾಗೂ ಹೈ ವರ್ಡ್ಸ ವಿಸ್ಕಿಯ 10 ಪ್ಯಾಕೇಟ್ ಗಳನ್ನು ಒಂದು ಬಿಳಿ ಚೀಲದ್ಲಲಿ ಹಾಕಿ ಸೀಲ್ ಮಾಡಿದರು. ಸ್ದಳದಲ್ಲಿ

ಪಂಚನಾಮೆಯನ್ನು 11.00 ರಿಂದ 12.00 ರವರೆಗೆ ಮಾಡಿದರು. ಸದರಿ ಪಂಚನಾಮೆಗೆ ನನ್ನ, ಪಂಚರ ಹಾಗೂ ಸಿಬ್ಬಂದಿಗಳ ಸಹಿ ಪಡೆದೆರು. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿಃ 1 ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿಃ 1(ಸಿ) ಎಂದು ಗುರುತಿಸಲಾಯಿತು. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಗುರುತಿಸುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಎಂ ಎಸ್ ಜಿ ವಕೀಲರಿಂದ**

2. ಮಾಹಿತಿ ಬಂದಾಗ ನಾವು ತೆಕ್ಕಲಕೋಟೆ ಬಳಿ ಇದ್ದೆವು. ಮಾಹಿತಿ ಬಂದಾಗ ನಾನು, ಚಾಸಾ 1 ಹಾಗೂ ಚಾಲಕ ಇದ್ದೆವು. ಮಾಹಿತಿ ಏನು ಬಂದಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಘಟನೆ ದಿನ ನಾವು ಸಿರುಗುಪ್ಪದಲ್ಲಿ ಗಸ್ತು ಕರ್ತವ್ಯ ಮಾಡುತ್ತಿದ್ದವು ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೂ ತೆಕ್ಕಲಕೋಟೆಗೂ ಒಂದು ಕೀ ಮಿ ದೂರ ಇರುತ್ತದೆ. ಮಾಹಿತಿ ಬಂದಾಗ ನಾವು ಇದ್ದ ಸ್ಥಳಕ್ಕೂ ಘಟನಾ ಸ್ಥಳಕ್ಕೂ ಒಂದು ಕಿ ಮಿ ದೂರ ಇತ್ತು. ಪಂಚರನ್ನು ಚಾಸಾ 1 ರವರು ಕರೆಯಿಸಿದರು. ಪಂಚರ ಹೆಸರು ಮರಿಸ್ವಾಮಿ ಹಾಗೂ ಮಲ್ಲಿಕಾರ್ಜುನ. ಅವರ ಯಾವ ಊರಿನವರು ಗೊತ್ತಿಲ್ಲ, ಅವರು ಬಸ್ ನಿಲ್ದಾಣದಲ್ಲಿ ಏಕೆ ಇದ್ದರು ಗೊತ್ತಿಲ್ಲ. ಅವರನ್ನು ನಾನು ವಿಚಾರಣೆ ಮಾಡಿಲ್ಲ. ಬಸ್ ನಿಲ್ದಾಣದ ಬಳಿ ನಾವು 5 ರಿಂದ 10 ನಿಮಿಷ ಇದ್ದೆವು. ನಾನು ತೆಕ್ಕಲಕೋಟೆಯಲ್ಲಿ ಆರೋಪಿಯನ್ನು ನೋಡಿಲ್ಲ ಎಂದರೆ ಸರಿ. ತೆಕ್ಕಲಕೋಟೆ ಉಪ್ಪಾರಹೊಸಳ್ಳಿ ರಸ್ತೆ ಮದ್ಯದಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದರು ಎಂದು ಮಾಹಿತಿ ಬಂದೀತ್ತು. ಆರೋಪಿ ವಾಹನದಲ್ಲಿ ತೆಕ್ಕಲಕೋಟೆಯಿಂದ ಘಟನಾ

ಸ್ಥಳಕ್ಕೆ ಹೋಗಲು 1-2 ನಿಮಿಷ ಸಾಕು ಎಂದರೆ ಸರಿ. ಮಾಹಿತಿ ಬಂದು ಘಟನಾ ಸ್ಥಳ ತಲುಪಲು 30 ನಿಮಿಷ ಬೇಕಾಯಿತು ಎಂದರೆ ಸರಿಯಲ್ಲ. ನಮಗೆ 2-3 ನಿಮಿಷ ಬೇಕಾಯಿತು. ಪಂಚನಾಮೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಪಂಚನಾಮೆಯನ್ನು ಚಾಸಾ 1 ರವರು ಬರೆದರು. ನಾವು ಯಾವುದೇ ದಾಳಿ, ಪಂಚನಾಮೆ ಹಾಗೂ ಜಪ್ತ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯವನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೋಸ್ಕರ ಚಾಸಾ 1 ರವರು ಸುಳ್ಳು ದೂರು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚಾಸಾ 1 ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**